> ಭ್ರಷ್ಟಾಚಾರ ತುಂಬಿರುವ ದೇಶಗಳಲ್ಲಿ ಒಳ್ಳೆಯ ಉದ್ದೇಶಕ್ಕಾಗಿ ತರುವ ಕಾನೂನನ್ನೂ ರಾಜಕಾರಣಿಗಳು ಮತ್ತು ಹಣವುಳ್ಳವರು ವೈಯಕ್ತಿಕ ಲಾಭಗಳಿಗೆ ದುರುಪಯೋಗಪಡಿಸಿಕೊಳ್ಳುವ ಮತ್ತು ನಿಜವನ್ನು ಬರೆಯುವವರನ್ನೇ ಸುಳ್ಳು ಸುದ್ದಿಗಾರರೆಂದು ಬಂಧಿಸುವ ಸಾಧ್ಯತೆಯಿದೆ. ಆ ಕಾರಣದಿಂದಾಗಿ ಸುಳ್ಳುಸುದ್ದಿಗಳನ್ನು ನಿಯಂತ್ರಿಸುವ ಕಾನೂನನ್ನು ತರುವುದನ್ನು ಮಾಧ್ಯಮದ ಎಲ್ಲರೂ ವಿರೋಧಿಸುತ್ತಾರೆ.

ಸುಳ್ಳುಸುದ್ದಿಗಳು ಎಂದಿನಿಂದಲೂ ಇವೆಯಾದರೂ ಇತ್ತೀಚೆಗಿನ ದಿನಗಳವರೆಗೆ ಹೆಚ್ಚು ಸುದ್ದಿ ಮಾಡಿರಲಿಲ್ಲ. ಆದರೆ ಅದು ಇಂದಿನ ಟೆಕ್ನಾಲಜಿಯನ್ನು ಬಳಸಿಕೊಂಡು ಎಲ್ಲ ದೇಶದ ಚುನಾವಣೆಗಳು, ಆಯ್ಕೆಯಾದ ಸರ್ಕಾರಗಳು, ವಿರೋಧ ಪಕ್ಷಗಳು, ಪ್ರಭಾವಶಾಲಿ ಉದ್ಯಮಿಗಳು, ಪತ್ರಿಕೆಗಳು ಎಲ್ಲರೂ ಸುಳ್ಳು ಸುದ್ದಿಗಳನ್ನು ಸೃಷ್ಟಿಸುವ ಕಾರ್ಯದಲ್ಲಿ ಕೈಗೂಡಿಸಿದ್ದಾರೆ.

ಮೊದಲು ಮೊದಲಿಗೆ 'ಸುಳ್ಳುಸುದ್ದಿಗಳು' ಎನ್ನುವ ವಿಚಾರ ಸಮಾಜಿಕ ಜಾಲತಾಣಗಳಿಂದ ಶುರುವಾಯ್ತೇನೋ ಎನ್ನುವಂತೆ ಕಂಡರೂ ನಂತರ ಅದು ಪತ್ರಿಕೋದ್ಯಮವನ್ನು ವ್ಯಾಪಕವಾಗಿ ಕಬಳಿಸಿರುವ ವಿಚಾರಗಳು ಹೊರಬಂದಿವೆ. ರಾಜಕೀಯ ವಲಯದ ಅಸಹ್ಯ ವ್ಯಾಪ್ತಿಯನ್ನು ಜನರಿಗೆ ತಲುಪಿಸಿ ಒಂದರ್ಥದಲ್ಲಿ ಭಯ ಹುಟ್ಟಿಸಿವೆ. ಒಂದು ದೇಶದ ಸುಳ್ಳುಸುದ್ದಿಗಳ ಕಾರ್ಖಾನೆಗಳ ಉತ್ಪನ್ನಗಳು ಅಂತರ್ಜಾಲದ ಕಾರಣ ಪ್ರಪಂಚದ ಇನ್ನಾವುದೋ ಮೂಲೆಯಿಂದ ಸರಬರಾಜಾಗಬಹುದಾಗಿದೆ.

2016ರಲ್ಲಿ ಅಮೆರಿಕದ 'ಬಝ್ ಫೀಡ್' (Buzz feed) ಎನ್ನುವ ಮಾಧ್ಯಮದ ಸಂಪಾದಕ ಕ್ರೇಗ್ ಸಿಲ್ವೆರ್ಮ್ಯಾನ್ ಎನ್ನುವವನು ಪೂರ್ವ ಯೂರೋಪಿನ ಮೆಸೆಡೋನಿಯ ಎನ್ನುವ ದೇಶದ ಪುಟ್ಟ ಪಟ್ಟಣ ವೆಲೆಸ್ ಎನ್ನುವ ಕಡೆಯಿಂದ ಭಾರಿ ಸರಣಿ ಸುಳ್ಳುಸುದ್ದಿಗಳು ಬರುತ್ತಿರುವುದನ್ನು ಗಮನಿಸಿದ. ಸಂಶೋಧನೆ ನಡೆಸಿದ ನಂತರ ಸುಮಾರು 140 ಸುಳ್ಳುಸುದ್ದಿಗಳನ್ನು ಹರಡುವ ವೆಬ್‌ಸೈಟ್‌ಗಳು ಅವನ ತಂಡದ ಗಮನಕ್ಕೆ ಬಂದವು. ಇದೇ ಸಮಯದಲ್ಲಿ ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮತ್ತು ಚುನಾವಣೆ ನಡೆಯುತ್ತಿತ್ತು.

ಮೆಸಡೋನಿಯಕ್ಕೂ ಅಮೆರಿಕ ಚುನಾವಣೆಗೂ ಯಾವ ಸಂಬಂಧ ಇಲ್ಲದಂತೆ ಕಂಡರೂ, ಅಲ್ಲಿನ ಯುವಜನರು ಸಾಮಾಜಿಕ ಜಾಲತಾಣವಾದ ಫೇಸ್‌ಬುಕ್‌ಗೆ ಅಮೆರಿಕ ಚುನಾವಣೆಯ ಬಗ್ಗೆ ಮತ್ತು ಸ್ಪರ್ಧಿಸುತ್ತಿದ್ದ ಡೊನಾಲ್ಡ್ ಟ್ರಂಪ್ ಬಗ್ಗೆ ಪುಂಖಾನುಪುಂಖವಾಗಿ ಕಥೆಗಳನ್ನು ಹರಿಯಬಿಡುತ್ತಿದ್ದರು. ಅದರಿಂದ ಉತ್ಪತ್ತಿಯಾಗುತ್ತಿದ್ದ ಜಾಹೀರಾತಿನ ಹಣ

## ಪುರಾಣಗಳಲ್ಲೂ ಫೇಕ್‌ನ್ಯೂಸ್ ಹಾವಳಿ!

ಸುಳ್ಳುಸುದ್ದಿಗಳು ಪುರಾಣ ಕಾಲದಿಂದಲೂ ಇವೆ ಎನ್ನುವುದಕ್ಕೆ ಉದಾಹರಣೆಗಳು ಇವೆ. ಮಹಾಭಾರತ ಯುದ್ಧದಲ್ಲಿ ಭೀಷ್ಮನು ಸತ್ತ ನಂತರ ಬ್ರಾಹ್ಮಣ ಗುರುವಾದ ದ್ರೋಣಾಚಾರ್ಯರಿಗೆ ಯುದ್ಧವನ್ನು ಮುನ್ನಡೆಸುವ ಕರ್ತವ್ಯ ಕಾಡುತ್ತದೆ. ಅರ್ಜುನನೂ ಸೇರಿದಂತೆ ಶತ್ರು ಪಾಳಯದಲ್ಲಿನ ಹಲವರಿಗೆ ತಮ್ಮ ಗುರುಗಳ ವಿರುದ್ಧ ಕಾದುವ ಪ್ರಸಂಗ ಎದುರಾಗುತ್ತದೆ. ದ್ರೋಣನೋ ಅತಿಪರಾಕ್ರಮಿ. ಆತನನ್ನು ಸೋಲಿಸುವುದು ಅಸಾಧ್ಯ ಎನ್ನುವ ಪರಿಸ್ಥಿತಿ ಎದುರಾಗುತ್ತದೆ. ಆತನಿಗಿದ್ದ ಒಂದೇ ಒಂದು ದೌರ್ಬಲ್ಯವೆಂದರೆ ತನ್ನ ಮಗ ಅಶ್ವತ್ಥಾಮನ ಬಗೆಗಿದ್ದ ಅಪರಿಮಿತ ಪ್ರೀತಿ. ಮಗನೂ ಕಾಳಗದಲ್ಲಿರುವಾತನೇ. ಈ ಸ್ಥಿತಿಯ ಲಾಭ ಪಡೆದ ಕೃಷ್ಣ 'ಅಶ್ವತ್ಥಾಮ' ಎಂಬ ಆನೆಯನ್ನು ಕೊಲ್ಲುವಂತೆ ಭೀಮನನ್ನು ಪುಸಲಾಯಿಸುತ್ತಾನೆ. ನಂತರ ಅಶ್ವತ್ಥಾಮನ ಮರಣದ ಬಗ್ಗೆ ಸುಳ್ಳುಸುದ್ದಿ ಹುಟ್ಟಿಸುತ್ತಾನೆ. ಇದನ್ನು ನಂಬದ ದ್ರೋಣ ಎಂದೂ ಸುಳ್ಳು ಹೇಳದ ಯುಧಿಷ್ಠಿರನನ್ನು 'ಇದು ನಿಜವೇ' ಎಂದು ದೃಢಪಡಿಸಲು ಕೇಳುತ್ತಾನೆ. ಯುಧಿಷ್ಠಿರ ಜೋರು ದನಿಯಲ್ಲಿ – 'ಅಶ್ವತ್ಥಾಮ ಹತಃ' (ಅಶ್ವತ್ಥಾಮ ಸತ್ತಿದ್ದಾನೆ) ಎಂದು ಕೂಗಿ ಹೇಳಿ ಮೆಲುದನಿಯಲ್ಲಿ ತನಗೆ ಮಾತ್ರ ಕೇಳಿಸುವಂತೆ, 'ಇತಿ ನರೋವ ಕುಂಜರೋವ' (ಅದು ಮನುಷ್ಯನೋ ಆನೆಯೋ ಗೊತ್ತಿಲ್ಲ) ಎಂದು ಉದ್ಗರಿಸುತ್ತಾನೆ. ಈ ಮೂಲಕ ಸುಳ್ಳು ಹೇಳಿಯೂ ಹೇಳಿಲ್ಲವೆನ್ನುವಂತೆ ಧರ್ಮಸಂಕಟದಿಂದ ಪಾರಾಗುತ್ತಾನೆ. ಆದರೆ ಆ ಸುಳ್ಳುಸುದ್ದಿಯನ್ನು ನಿಜವೆಂದು ಬಗೆದು ದ್ರೋಣರು ಶಸ್ತ್ರತ್ಯಾಗ ಮಾಡಿದಾಗ ದೃಷ್ಟದ್ಯುಮ್ನ ದ್ರೋಣನನ್ನು ವಧಿಸುತ್ತಾನೆ.

